ತಮ್ಮ ಮನೆಗಳನ್ನು ಹಾಳುಗೆಡಹುತ್ತಿದ್ದರು. ಆದುದರಿಂದ ಕಣ್ಣುಳ್ಳವರೇ ಪಾಠ ಕಲಿಯಿರಿ.

بِأَيْدِيهِمْ وَأَيْدِي الْمُؤْمِنِينَ فَاعْتَبِرُوا يَا أُولِي الْأَبْصَارِ ②

3. ಅಲ್ಲಾಹನು ಅವರ ಪಾಲಿಗೆ ದೇಶಭ್ರಷ್ಟತೆಯನ್ನು ವಿಧಿಸದಿರುತ್ತಿದ್ದರೆ ಈ ಲೋಕದಲ್ಲೇ ಅವರಿಗೆ ಯಾತನೆ ಕೊಟ್ಟು ಬಿಡುತ್ತಿದ್ದನು[3] ಮತ್ತು ಪರಲೋಕದಲ್ಲಂತು ಅವರಿಗೆ ನರಕಾಗ್ನಿಯ ಯಾತನೆ ಇದ್ದೇ ಇದೆ.

وَلَوْلَا أَنْ كَتَبَ اللَّهُ عَلَيْهِمُ الْجَلَاءَ لَعَذَّبَهُمْ فِي الدُّنْيَا ۖ وَلَهُمْ فِي الْآخِرَةِ عَذَابُ النَّارِ ③

4. ಅವರು ಅಲ್ಲಾಹ್ ಮತ್ತು ಅವನ ಸಂದೇಶವಾಹಕರನ್ನು ಎದುರಿಸಿದ್ದರಿಂದ ಇದೆಲ್ಲ ಸಂಭವಿಸಿತು. ಅಲ್ಲಾಹನನ್ನು ಯಾರೇ ಎದುರಿಸಿದರೂ ಅಲ್ಲಾಹನು ಅವನಿಗೆ ಶಿಕ್ಷೆ ಕೊಡುವುದರಲ್ಲಿ ಕಠೋರನು.

ذَٰلِكَ بِأَنَّهُمْ شَاقُّوا اللَّهَ وَرَسُولَهُ ۖ وَمَنْ يُشَاقِّ اللَّهَ فَإِنَّ اللَّهَ شَدِيدُ الْعِقَابِ ④

5. ನೀವು ಖರ್ಜೂರದ ಮರಗಳನ್ನು ಕಡಿದುದು ಅಥವಾ ಅವುಗಳ ಕಾಂಡಗಳಲ್ಲಿ ನಿಲ್ಲಲು ಬಿಟ್ಟುದು ಇವೆಲ್ಲವೂ ಅಲ್ಲಾಹನ ಅನುಮತಿಯಿಂದಲೇ ಆಗಿತ್ತು[4] ಮತ್ತು 'ವಚನಭ್ರಷ್ಟ'ರನ್ನು ಅಪಮಾನಿಸಲಿಕ್ಕಾಗಿ (ಅಲ್ಲಾಹನು ಈ ಅನುಮತಿ ನೀಡಿದನು).[5]

مَا قَطَعْتُمْ مِنْ لِينَةٍ أَوْ تَرَكْتُمُوهَا قَائِمَةً عَلَىٰ أُصُولِهَا فَبِإِذْنِ اللَّهِ وَلِيُخْزِيَ الْفَاسِقِينَ ⑤

6. ಅಲ್ಲಾಹನು[6] ಅವರ ವಶದಿಂದ ತೆಗೆದು ತನ್ನ ಸಂದೇಶವಾಹಕರ

وَمَا أَفَاءَ اللَّهُ عَلَىٰ رَسُولِهِ مِنْهُمْ فَمَا

3. ಲೋಕದ ಯಾತನೆಯೆಂದರೆ ಅವರ ನಾಮಾವಶೇಷವಾಗಿದೆ. ಅವರು ಸಂಧಾನದ ಮೂಲಕ ಪ್ರಾಣ ರಕ್ಷಣೆ ಮಾಡಿಕೊಳ್ಳುವ ಬದಲು ಯುದ್ಧ ಮಾಡುತ್ತಿದ್ದರೆ ಸಂಪೂರ್ಣವಾಗಿ ನಾಶವಾಗಿ ಬಿಡುತ್ತಿದ್ದರು.

4. ಮುಸ್ಲಿಮರು ಮುತ್ತಿಗೆ ಹಾಕುವ ಬದಲು ಅದಕ್ಕೆ ಯಾವುದೇ ರೀತಿಯ ಅಡಚಣೆಯುಂಟಾಗದಿರಲು ಬನೀನಝೀರ್ ಗ್ರಾಮದ ಸುತ್ತಮುತ್ತಲ ಪ್ರದೇಶದಲ್ಲಿದ್ದ ಖರ್ಜೂರದ ತೋಟದ ಅನೇಕ ಮರಗಳನ್ನು ಕಡಿದು ಹಾಕಿದರು, ಇಲ್ಲವೇ ಬೆಂಕಿ ಹಚ್ಚಿದರು. ಸೇನಾ ಕಾರ್ಯಾಚರಣೆಗೆ ಅಡಚಣೆಯುಂಟು ಮಾಡದಂತಹ ಮರಗಳನ್ನು ಹಾಗೆಯೇ ಬಿಟ್ಟು ಬಿಡಲಾಯಿತು. ಇದರಿಂದಾಗಿ ಮದೀನಾದ ಕಪಟವಿಶ್ವಾಸಿಗಳು ಮತ್ತು ಯಹೂದಿಯರು ಮುಹಮ್ಮದ್‌ರು(ಸ) ಭೂಮಿಯಲ್ಲಿ ಕ್ಷೋಭೆಯುಂಟು ಮಾಡುವುದರಿಂದ ತಡೆಯುತ್ತಾರೆ. ಆದರೆ ಇದೇನು! ಹಸಿರಿನಿಂದ ನಳನಳಿಸುವ ಫಲಭರಿತ ಮರಗಳನ್ನು ಕಡಿಯಲಾಗುತ್ತಿದೆ. ಇದು ಭೂಮಿಯಲ್ಲಿ ಕ್ಷೋಭೆಯುಂಟು ಮಾಡುವುದಲ್ಲದಿದ್ದರೆ ಮತ್ತೇನು ಎಂದು ಗುಲ್ಲೆಬ್ಬಿಸಿದರು. ಅದಕ್ಕಾಗಿ ಅಲ್ಲಾಹನು ನೀವು ಮರಗಳನ್ನು ಕಡಿದುದಾಗಲಿ ಅಥವಾ ಹಾಗೆಯೇ ಇರಲು ಬಿಟ್ಟದ್ದಾಗಲೀ ಅಸಿಂಧು ಕಾರ್ಯವಲ್ಲ. ಬದಲಾಗಿ ಅವೆರಡೂ ಅಲ್ಲಾಹನ ಇಚ್ಛೆಗೆ ಅನುಸಾರವಾಗಿದೆ ಎಂಬ ವಾಣಿಯನ್ನು ಅವತೀರ್ಣಗೊಳಿಸಿದನು. ಈ ವಿಷಯದ ಬಗ್ಗೆಯೇ ಈ ಸೂಕ್ತದಲ್ಲಿ ಸೂಚಿಸಲಾಗಿದೆ.

5. ಅರ್ಥಾತ್- ಆ ಮರಗಳನ್ನು ಕಡಿಯುವುದರಿಂದಲೂ ಕಡಿಯದಿರುವುದರಿಂದಲೂ ಅವರು ನಿಂದ್ಯರಾಗಬೇಕೆಂದು ಅಲ್ಲಾಹನ ಇಚ್ಛೆಯಾಗಿತ್ತು. ಮರಗಳನ್ನು ಕಡಿಯುವ ಮೂಲಕ ಅವರ ನಿಂದ್ಯತೆ ಹೇಗೆಂದರೆ ಅವರು ಸ್ವಕರಗಳ ಮೂಲಕ ಯಾವ ತೋಟವನ್ನು ನೆಟ್ಟು ಬೆಳೆಸಿದ್ದರೋ ಮತ್ತು ದೀರ್ಘ ಕಾಲದಿಂದ ಯಾವ ತೋಟಗಳ ಒಡೆತನವನ್ನು ಹೊಂದಿದ್ದರೋ ಅದನ್ನು ಅವರ ಕಣ್ಣ ಮುಂದೆಯೇ ಕಡಿಯಲಾಗುತ್ತಿದೆ ಮತ್ತು ಕಡಿಯುವವರನ್ನು ತಡೆಯುವಲ್ಲಿ ಅವರು ಅಸಹಾಯಕರಾಗಿದ್ದಾರೆ. ಮರಗಳನ್ನು ಕಡಿಯದಿರುವ ಮೂಲಕ ಆಗುವ ನಿಂದ್ಯತೆ ಹೇಗೆಂದರೆ ನಿನ್ನೆಯ ತನಕ ತಮ್ಮ ಒಡೆತನದಲ್ಲಿದ್ದ ಹಸಿರು ನಸಿರಾದ ತೋಟಗಳು ಇಂದು ಮುಸ್ಲಿಮರ ವಶವಾಗುತ್ತಿರುವುದನ್ನು ಅವರು ಮದೀನಾದಿಂದ ಹೊರಡುವಾಗ ಕಣ್ಣಾರೆ ಕಾಣುತ್ತಿದ್ದರು. ಅವರಿಗೆ ಸಾಧ್ಯವಿರುತ್ತಿದ್ದರೆ ಅವರು ಒಂದು ಮರವೂ ಸುರಕ್ಷಿತವಾಗುಳಿದು ಮುಸ್ಲಿಮರ ವಶವಾಗದಂತೆ ಅದನ್ನು ಸರ್ವನಾಶಗೊಳಿಸಿ ಹೋಗುತ್ತಿದ್ದರು. ಆದರೆ ತಮ್ಮ ಅಸಹಾಯಕ ಪರಿಸ್ಥಿತಿಯಲ್ಲಿ ಅವರು ಎಲ್ಲವನ್ನೂ ಹಾಗೆಯೇ ಬಿಟ್ಟು ಹತಾಶರಾಗಿ ಹೊರಟು ಹೋದರು.

6. ಮೊದಲು ಬನೀನಝೀರ್‌ನ ಅಧೀನವಿದ್ದ ಮತ್ತು ಅವರ ದೇಶಾಂತರದ ಬಳಿಕ ಇಸ್ಲಾಮೀ ಸರಕಾರದ ಅಧೀನಕ್ಕೆ ಬಂದ ಆಸ್ತಿಪಾಸ್ತಿ

ಕಡೆಗೆ ಮರಳಿಸಿದ ಸೊತ್ತು-[7] ನೀವು ಕುದುರೆಗಳನ್ನು ಮತ್ತು ಒಂಟೆಗಳನ್ನು ಓಡಿಸಿ ಗಳಿಸಿದ ಸೊತ್ತಲ್ಲ. ವಾಸ್ತವದಲ್ಲಿ ಅಲ್ಲಾಹನು ತನ್ನ ಸಂದೇಶವಾಹಕರುಗಳಿಗೆ ತಾನಿಚ್ಛಿಸಿದವರ ಮೇಲೆ ಪ್ರಾಬಲ್ಯ ವನ್ನು ನೀಡುತ್ತಾನೆ ಮತ್ತು ಅಲ್ಲಾಹನು ಸಕಲ ವಿಷಯಗಳಿಗೆ ಸಾಮರ್ಥ್ಯವುಳ್ಳವನು.[8]

أَوْجَفْتُمْ عَلَيْهِ مِنْ خَيْلٍ وَّلَا رِكَابٍ وَّلٰكِنَّ اللّٰهَ يُسَلِّطُ رُسُلَهٗ عَلٰى مَنْ يَّشَآءُ ۗ وَاللّٰهُ عَلٰى كُلِّ شَيْءٍ قَدِيْرٌ ⑥

7. ಅಲ್ಲಾಹನು ನಾಡುಗಳ ಜನರಿಂದ ತನ್ನ ಸಂದೇಶವಾಹಕರ ಕಡೆಗೆ ಮರಳಿಸಿದ್ದೆಲ್ಲವೂ ಅಲ್ಲಾಹ್ ಮತ್ತು ಸಂದೇಶವಾಹಕರಿಗಾಗಿದೆ ಹಾಗೂ ಸಂಬಂಧಿಕರು,[9] ಅನಾಥರು, ದರಿದ್ರರು ಮತ್ತು ಪ್ರಯಾಣಿಕ ರಿಗಾಗಿದೆ. (ಅದು) ನಿಮ್ಮ ಶ್ರೀಮಂತರ ನಡುವೆ ಮಾತ್ರ ಚಲಿಸುತ್ತ ಇರಬಾರದೆಂದು (ಹೀಗೆ ಮಾಡಲಾಗಿದೆ)[10] ರಸೂಲರು ನಿಮಗೆ ಏನು ಕೊಡುವರೋ ಅದನ್ನು ಸ್ವೀಕರಿಸಿಕೊಳ್ಳಿರಿ ಮತ್ತು ಯಾವು ದರಿಂದ ಅವರು ನಿಮ್ಮನ್ನು ತಡೆಯುವರೋ ಅದರಿಂದ

مَآ اَفَآءَ اللّٰهُ عَلٰى رَسُوْلِهٖ مِنْ اَهْلِ الْقُرٰى فَلِلّٰهِ وَلِلرَّسُوْلِ وَلِذِى الْقُرْبٰى وَالْيَتٰمٰى وَالْمَسٰكِيْنِ وَابْنِ السَّبِيْلِ ۙ كَيْ لَا يَكُوْنَ دُوْلَةًۢ بَيْنَ الْاَغْنِيَآءِ مِنْكُمْ ۗ وَمَآ اٰتٰىكُمُ الرَّسُوْلُ فَخُذُوْهُ

ಮತ್ತು ಸೊತ್ತುಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಲಾಗುತ್ತಿದೆ. ಇಲ್ಲಿಂದ 10ನೆಯ ಸೂಕ್ತದ ತನಕ ಅವುಗಳ ವ್ಯವಸ್ಥೆ ಹೇಗಿರಬೇಕು ಎಂದು ಅಲ್ಲಾಹನು ತಿಳಿಸಿದ್ದಾನೆ.

7. ಈ ಭೂಮಿ ಮತ್ತು ಅಂದು ಒಳಗೊಂಡಿರುವ ಸಕಲ ವಸ್ತುಗಳು ವಾಸ್ತವದಲ್ಲಿ ಅಲ್ಲಾಹನ ಧಿಕ್ಕಾರಿಗಳ ಸೊತ್ತಲ್ಲ ಎಂದು ಈ ಪದಗಳು ಸಾರಿ ಹೇಳುತ್ತಿವೆ. ಆದ್ದರಿಂದ ಸತ್ಯದಿಂದ ಕೂಡಿದ ಧರ್ಮಸಮ್ಮತವಾದ ಯುದ್ಧವೊಂದರ ಮೂಲಕ ಸತ್ಯನಿಷೇಧಿಗಳ ಕೈಯಿಂದ ಸತ್ಯವಿಶ್ವಾಸಿಗಳ ವಶಕ್ಕೆ ಬಂದ ಸೊತ್ತು ವಿತ್ತಗಳ ನಿಜವಾದ ಸ್ಥಿತಿ ಹೇಗಿದೆಯೆಂದರೆ, ಅದರ ಒಡೆಯನು ಅದನ್ನು ತನ್ನ ಕೃತಘ್ನ ಮತ್ತು ಧಿಕ್ಕಾರಿಗಳಾದ ದಾಸರ ಕೈಯಿಂದ ತೆಗೆದು ಆಜ್ಞಾನುಸಾರಿಗಳಾದ ದಾಸರ ಕೈಗೆ ಮರಳಿಸಿದನು. ಆದ್ದರಿಂದಲೇ ಆ ಸೊತ್ತು ವಿತ್ತಗಳನ್ನು ಇಸ್ಲಾಮೀ ಕಾನೂನಿನ ಪಾರಿಭಾಷಿಕದಲ್ಲಿ 'ಫಯೆ' (ಮರಳಿಸಿ ತರಲಾದ ಸೊತ್ತು) ಎನ್ನಲಾಗಿದೆ.

8. ಅರ್ಥಾತ್- ಯಾವುದೇ ಹೋರಾಟ ನಡೆಸುವ ಸೇನೆಯ ಜಂಘಾಬಲದಿಂದಾಗಿ ಈ ಸೊತ್ತು ಮುಸ್ಲಿಮರ ವಶವಾಗಿಲ್ಲ. ಬದಲಾಗಿ ಅಲ್ಲಾಹನು ತನ್ನ ಪ್ರವಾದಿ ಮತ್ತವರ ಸಮುದಾಯ ಹಾಗೂ ಅವರು ಸ್ಥಾಪಿಸಿರುವಂತಹ ವ್ಯವಸ್ಥೆಗೆ ದಯಪಾಲಿಸಿರುವ ಸಾಮೂಹಿಕ ಶಕ್ತಿಯಿಂದಾಗಿ ಇದು ಸಾಧ್ಯವಾಗಿದೆ. ಆದ್ದರಿಂದ ಇದು ಸಮರಾರ್ಜಿತ ಸೊತ್ತಿಗಿಂತ ಭಿನ್ನ ಸ್ವರೂಪದ್ದಾಗಿದೆ. ಸಮರಾರ್ಜಿತ ಸೊತ್ತಿನಂತೆ ಅದನ್ನೂ ಪರಸ್ಪರರಲ್ಲಿ ವಿತರಣೆ ಮಾಡಿಕೊಳ್ಳಲು ಸೇನೆಗೆ ಅಧಿಕಾರವಿಲ್ಲ. ಹೀಗೆ ಶರೀಅತ್‌ನಲ್ಲಿ ಸಮರಾರ್ಜಿತ ಸೊತ್ತು ಮತ್ತು 'ಫಯೆ'ಗೆ ವಿಭಿನ್ನ ಆದೇಶಗಳಿವೆ. ಯುದ್ಧ ಕಾರ್ಯಾಚರಣೆಯ ವೇಳೆ ಶತ್ರು ಸೈನಿಕರಿಂದ ವಶಪಡಿಸಿಕೊಳ್ಳಲಾದ ಚರ ಸೊತ್ತುಗಳು 'ಸಮರಾರ್ಜಿತ ಸೊತ್ತಾಗಿದೆ.' ಅದಕ್ಕೆ ಹೊರತಾದ ಶತ್ರುಗಳ ನಾಡಿನ ಭೂಪ್ರದೇಶ, ಮನೆ ಮತ್ತಿತರ ಸ್ಥಿರ-ಚರ ಸೊತ್ತುಗಳು 'ಸಮರಾರ್ಜಿತ ಸೊತ್ತಿನ' ಸಾಲಿಗೆ ಸೇರದೆ 'ಫಯೆ'ಯ ಸಾಲಿಗೆ ಸೇರುತ್ತದೆ.

9. ಸಂಬಂಧಿಕರು ಎಂದರೆ ಪ್ರವಾದಿವರ್ಯರ(ಸ) ಸಂಬಂಧಿಕರಾಗಿದ್ದಾರೆ. ಅರ್ಥಾತ್, ಬನೀ ಹಾಶಿಮ್ ಮತ್ತು ಬನೀಮುತ್ತಲಿಬ್ ಗೋತ್ರದವರು. ಪ್ರವಾದಿವರ್ಯರು(ಸ) ತಮ್ಮ ಮತ್ತು ತಮ್ಮ ಕುಟುಂಬಸ್ಥರ ಹಕ್ಕುಗಳನ್ನು ಪೂರೈಸಿದ ನಂತರ ಸಹಾಯದ ಅಗತ್ಯವಿರುವ ಅಥವಾ ಪ್ರವಾದಿವರ್ಯರಿಗೆ(ಸ) ಸಹಾಯಾಪೇಕ್ಷಿಗಳೆಂದು ತೋರುವ ಸಂಬಂಧಿಕರ ಹಕ್ಕುಗಳನ್ನೂ ನೀಡುವಂತಾಗಲು ಪ್ರವಾದಿವರ್ಯರಿಗೆ(ಸ) ಈ ಪಾಲನ್ನು ಗೊತ್ತುಪಡಿಸಲಾಗಿದೆ. ಪ್ರವಾದಿವರ್ಯರ(ಸ) ನಿಧನಾನಂತರ ಇದು ಪ್ರತ್ಯೇಕ ಮತ್ತು ಸ್ಥಿರವಾದ ಪಾಲಾಗಿ ಉಳಿದಿರಲಿಲ್ಲ. ಅನಂತರ ಮುಸ್ಲಿಮರ ಪೈಕಿಯ ಇತರ ಬಡವರು, ಅನಾಥರು ಮತ್ತು ಯಾತ್ರಿಕರಂತೆಯೇ ಬನೀ ಹಾಶಿಮ್ ಮತ್ತು ಬನೀಮುತ್ತಲಿಬ್‌ನ ಅಪೇಕ್ಷಿತ ವ್ಯಕ್ತಿಗಳ ಹಕ್ಕುಗಳೂ ಬೈತುಲ್‌ಮಾಲ್‌ನ ಬಾಧ್ಯತೆಯಾಯಿತು. ಆದರೆ ಝಕಾತ್‌ನಲ್ಲಿ ಅವರಿಗೆ ಪಾಲಿಲ್ಲದಿರುವುದರಿಂದ ಅವರ ಹಕ್ಕಿಗೆ ಇತರರಿಗಿಂತ ಹೆಚ್ಚು ಪ್ರಾಶಸ್ತ್ಯ ನೀಡಲಾಯಿತು.

10. ಇದು ಪವಿತ್ರ ಕುರ್‌ಆನಿನ ಪ್ರಮುಖ ತಾತ್ವಿಕ ನಿರ್ದೇಶನಗಳಲ್ಲೊಂದಾಗಿದೆ. ಇದರಲ್ಲಿ ಇಸ್ಲಾಮೀ ಸಮಾಜ ಮತ್ತು ಸರಕಾರದ ಆರ್ಥಿಕ ನೀತಿಯ ಮೂಲಭೂತ ತತ್ವವನ್ನು ವಿವರಿಸಲಾಗಿದೆ. ಸಂಪತ್ತಿನ ಚಲಾವಣೆ ಸಮಸ್ತ ಸಮಾಜದಲ್ಲಿರಬೇಕಾಗಿದೆ. ಸಂಪತ್ತು ಕೇವಲ ಸಿರಿವಂತರ ನಡುವೆಯೇ ಚಲಾವಣೆಯಲ್ಲಿರುವುದು ಅಥವಾ ಧನಿಕರು ದಿನದಿಂದ ದಿನಕ್ಕೆ ಧನಿಕರಾಗುತ್ತಾ ಸಾಗುವುದು ಮತ್ತು ಬಡವರು ದಿನದಿಂದ ದಿನಕ್ಕೆ ಬಡವರಾಗುತ್ತಾ ಸಾಗುವುದು ಸಲ್ಲದು ಎಂಬುದೇ ಈ ಮೂಲಭೂತ ತತ್ವವಾಗಿದೆ.

ದೂರವಿರಿ. ಅಲ್ಲಾಹನನ್ನು ಭಯಪಡಿರಿ. ಅಲ್ಲಾಹನು ಕಠಿಣವಾಗಿ ಶಿಕ್ಷಿಸುವವನಾಗಿರುತ್ತಾನೆ.[11]

وَمَا نَهٰىكُمْ عَنْهُ فَانْتَهُوْا ۚ وَاتَّقُوا اللّٰهَ ؕ
اِنَّ اللّٰهَ شَدِيْدُ الْعِقَابِ ۘ ٧

8. (ಮಾತ್ರವಲ್ಲದೆ ಆ ಸೊತ್ತು) ತಮ್ಮ ಮನೆಗಳಿಂದಲೂ ಆಸ್ತಿಪಾಸ್ತಿಗಳಿಂದಲೂ ಹೊರಕ್ಕಟ್ಟಲ್ಪಟ್ಟಿರುವ ಬಡ ಮುಹಾಜಿರರಿಗಾಗಿಯೂ ಇದೆ. ಇವರು ಅಲ್ಲಾಹನ ಅನುಗ್ರಹವನ್ನೂ ಅವನ ಸಂಪ್ರೀತಿಯನ್ನೂ ಬಯಸುತ್ತಾರೆ ಮತ್ತು ಅಲ್ಲಾಹ್ ಮತ್ತು ಅವನ ರಸೂಲರ ಸಹಾಯಕ್ಕೆ ಸದಾ ಸನ್ನದ್ಧರಾಗಿರುತ್ತಾರೆ. ಇವರೇ ಸತ್ಯಸಂಧರು.

لِلْفُقَرَآءِ الْمُهٰجِرِيْنَ الَّذِيْنَ اُخْرِجُوْا
مِنْ دِيَارِهِمْ وَاَمْوَالِهِمْ يَبْتَغُوْنَ
فَضْلًا مِّنَ اللّٰهِ وَرِضْوَانًا وَّيَنْصُرُوْنَ
اللّٰهَ وَرَسُوْلَهٗ ؕ اُولٰٓئِكَ هُمُ الصّٰدِقُوْنَ ۚ ٨

9. (ಮತ್ತು ಆ ಸೊತ್ತು) ಈ ಮುಹಾಜಿರರ ಆಗಮನಕ್ಕೆ ಮುಂಚೆಯೇ ಸತ್ಯವಿಶ್ವಾಸ ಸ್ವೀಕಾರ ಮಾಡಿ ಮದೀನಾದಲ್ಲಿ ವಾಸವಾಗಿದ್ದವರಿಗೆ (ಸಹ ಇದೆ).[12] ಇವರು ಹಿಜ್ರತ್ ಮಾಡಿ ತಮ್ಮ ಬಳಿಗೆ ಬಂದವರನ್ನು ಪ್ರೀತಿಸುತ್ತಾರೆ. ಅವರಿಗೆ ನೀಡಲ್ಪಟ್ಟುದರ ಕುರಿತು ಇವರು ಯಾವುದೇ ಆಶೆಯನ್ನು ತಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಸ್ವತಃ ತಮಗೆ ಅಗತ್ಯವಿದ್ದರೂ ಇತರರಿಗೆ ತಮ್ಮ ಮೇಲೆ ಪ್ರಾಶಸ್ತ್ಯ ನೀಡುತ್ತಾರೆ. ವಾಸ್ತವದಲ್ಲಿ ಯಾರು ತಮ್ಮ ಮನಸ್ಸಿನ ಸಂಕುಚಿತತೆಯಿಂದ ರಕ್ಷಿಸಲ್ಪಟ್ಟರೋ ಅವರೇ ವಿಜಯಿಗಳು.

وَالَّذِيْنَ تَبَوَّؤُ الدَّارَ وَالْاِيْمَانَ مِنْ
قَبْلِهِمْ يُحِبُّوْنَ مَنْ هَاجَرَ اِلَيْهِمْ
وَلَا يَجِدُوْنَ فِيْ صُدُوْرِهِمْ حَاجَةً
مِّمَّآ اُوْتُوْا وَيُؤْثِرُوْنَ عَلٰٓى اَنْفُسِهِمْ
وَلَوْ كَانَ بِهِمْ خَصَاصَةٌ ۗ وَمَنْ يُّوْقَ
شُحَّ نَفْسِهٖ فَاُولٰٓئِكَ هُمُ الْمُفْلِحُوْنَ ۚ ٩

10. ಅದು, ಮುಂಚೆ ಬಂದ ಈ ಜನರ ಬಳಿಕ ಬರುವವರಿಗಾಗಿಯೂ ಇದೆ.[13] ಅವರು ಹೀಗೆ ಪ್ರಾರ್ಥಿಸುತ್ತಾರೆ: "ನಮ್ಮ ಪ್ರಭೂ, ನಮ್ಮನ್ನೂ ನಮಗಿಂತ ಮುಂಚೆ ಸತ್ಯವಿಶ್ವಾಸ ಸ್ವೀಕಾರ ಮಾಡಿದ್ದ ನಮ್ಮೆಲ್ಲ ಸಹೋದರರನ್ನೂ ಕ್ಷಮಿಸಿ ಬಿಡು ಮತ್ತು ನಮ್ಮ ಮನಗಳಲ್ಲಿ ಸತ್ಯವಿಶ್ವಾಸಿಗಳ ಬಗ್ಗೆ ಯಾವುದೇ ಹಗೆತನವನ್ನಿರಿಸದಿರು. ನಮ್ಮ ಪ್ರಭೂ, ನೀನು ಮಹಾ ವಾತ್ಸಲ್ಯಪೂರ್ಣನೂ ಕರುಣಾನಿಧಿಯೂ ಆಗಿರುವೆ."[14]

وَالَّذِيْنَ جَآءُوْ مِنْ بَعْدِهِمْ يَقُوْلُوْنَ
رَبَّنَا اغْفِرْ لَنَا وَلِاِخْوَانِنَا الَّذِيْنَ سَبَقُوْنَا
بِالْاِيْمَانِ وَلَا تَجْعَلْ فِيْ قُلُوْبِنَا غِلًّا
لِّلَّذِيْنَ اٰمَنُوْا رَبَّنَآ اِنَّكَ رَءُوْفٌ رَّحِيْمٌ ١٠

11. ಇದು 'ಬನೀನಝೀರ್'ನ ಸೊತ್ತುಗಳ ವಿತರಣೆಗೆ ಸಂಬಂಧಿಸಿದಂತೆ ನೀಡಲಾದ ಆದೇಶವಾದರೂ ಇದೊಂದು ಸಾರ್ವತ್ರಿಕ ಆದೇಶವಾಗಿದೆ. ಮುಸ್ಲಿಮರು ಎಲ್ಲಾ ವ್ಯವಹಾರಗಳಲ್ಲಿ ಪ್ರವಾದಿವರ್ಯರನ್ನು(ಸ) ಅನುಸರಿಸಬೇಕೆಂಬುದೇ ಈ ಆಜ್ಞೆಯ ಇಂಗಿತವಾಗಿದೆ. ಇಲ್ಲಿ 'ಪ್ರವಾದಿವರ್ಯರು(ಸ) ನಿಮಗೆ ಏನನ್ನು ಕೊಡುವರೋ' ಎಂಬುದಕ್ಕೆ ಪ್ರತಿಯಾಗಿ 'ಏನನ್ನು ಕೊಡುವುದಿಲ್ಲವೋ' ಎಂಬ ಮಾತನ್ನು ಪ್ರಯೋಗಿಸಲಾಗಿಲ್ಲ, ಬದಲಾಗಿ 'ಯಾವುದರಿಂದ ನಿಮ್ಮನ್ನು ತಡೆಯುವರೋ' ಎಂಬ ಪದವನ್ನು ಪ್ರಯೋಗಿಸಲಾಗಿದೆ. ಇದರಿಂದಲೂ ಆಜ್ಞೆಯ ಇಂಗಿತವೇನೆಂಬುದು ಸ್ಪಷ್ಟವಾಗುತ್ತದೆ.

12. ಅರ್ಥಾತ್- ಅನ್ಸಾರ್‌ಗಳು ಅಂದರೆ 'ಫಯೆ'ನಲ್ಲಿ ಕೇವಲ ಮುಹಾಜಿರ್(ವಲಸಿಗರು)ಗಳಿಗೆ ಮಾತ್ರ ಹಕ್ಕಿರುವುದಲ್ಲ. ಬದಲಾಗಿ ಮೊದಲಿನಿಂದಲೇ 'ದಾರುಲ್ ಇಸ್ಲಾಮ್'ನಲ್ಲಿ ನೆಲೆಸಿದ್ದ ಮುಸ್ಲಿಮರೂ ಪಾಲಿಗೆ ಅರ್ಹರಾಗಿದ್ದಾರೆ.

13. ಅರ್ಥಾತ್- 'ಫಯೆ' ಸೊತ್ತಿನಲ್ಲಿ ಈಗಿರುವ ಪೀಳಿಗೆಗೆ ಮಾತ್ರವಲ್ಲ ಮುಂಬರುವ ಪೀಳಿಗೆಗೂ ಹಕ್ಕಿದೆ.

14. ಈ ಸೂಕ್ತದಲ್ಲಿ ಮುಸ್ಲಿಮರಿಗೆ ಪ್ರಮುಖ ನೈತಿಕ ಬೋಧನೆಯೊಂದನ್ನು ನೀಡಲಾಗಿದೆ. ಅದೇನೆಂದರೆ ಅವರು ಯಾವ ಮುಸ್ಲಿಮರ

11. ಕಾಪಟ್ಯದ[15] ನೀತಿಯನ್ನು ಅನುಸರಿಸಿದವರನ್ನು ನೀವು ನೋಡಿಲ್ಲವೇ? ಇವರು ಗ್ರಂಥದವರಾದ ತಮ್ಮ ಸತ್ಯನಿಷೇಧಿ ಸಹೋದರರೊಡನೆ, "ನಿಮ್ಮನ್ನು ಹೊರ ಹಾಕಿದರೆ ನಿಮ್ಮ ಜೊತೆ ನಾವೂ ಹೊರಡುವೆವು ಮತ್ತು ನಿಮ್ಮ ವಿಷಯದಲ್ಲಿ ನಾವು ಖಂಡಿತ ಯಾರ ಮಾತನ್ನೂ ಒಪ್ಪಲಾರೆವು ಮತ್ತು ನಿಮ್ಮ ವಿರುದ್ಧ ಯುದ್ಧ ಮಾಡಲಾದರೆ ನಾವು ನಿಮಗೆ ಸಹಾಯ ಮಾಡುವೆವು" ಎನ್ನುತ್ತಾರೆ. ಆದರೆ ಇವರು ಶುದ್ಧ ಸುಳ್ಳುಗಾರರೆಂಬುದಕ್ಕೆ ಅಲ್ಲಾಹನು ಸಾಕ್ಷಿಯಾಗಿದ್ದಾನೆ.

أَلَمْ تَرَ إِلَى الَّذِينَ نَافَقُوا يَقُولُونَ
لِإِخْوَانِهِمُ الَّذِينَ كَفَرُوا مِنْ أَهْلِ
الْكِتَابِ لَئِنْ أُخْرِجْتُمْ لَنَخْرُجَنَّ
مَعَكُمْ وَلَا نُطِيعُ فِيكُمْ أَحَدًا أَبَدًا
وَإِنْ قُوتِلْتُمْ لَنَنْصُرَنَّكُمْ وَاللَّهُ
يَشْهَدُ إِنَّهُمْ لَكَاذِبُونَ ⑪

12. ಅವರು ಹೊರ ಹಾಕಲ್ಪಟ್ಟರೆ ಇವರು ಖಂಡಿತ ಅವರ ಜೊತೆ ಹೊರಡಲಾರರು ಮತ್ತು ಅವರ ವಿರುದ್ಧ ಯುದ್ಧ ಮಾಡಲಾದರೆ ಇವರು ಖಂಡಿತ ಅವರಿಗೆ ಸಹಾಯ ಮಾಡಲಾರರು ಮತ್ತು ಒಂದು ವೇಳೆ ಇವರು ಸಹಾಯ ಮಾಡಿದರೂ ಬೆನ್ನು ತಿರುಗಿಸಿ ಓಡುವರು. ಅನಂತರ ಎಲ್ಲಿಂದಲೂ ಯಾವ ಸಹಾಯವನ್ನೂ ಪಡೆಯಲಾರರು.

لَئِنْ أُخْرِجُوا لَا يَخْرُجُونَ مَعَهُمْ
وَلَئِنْ قُوتِلُوا لَا يَنْصُرُونَهُمْ وَلَئِنْ
نَصَرُوهُمْ لَيُوَلُّنَّ الْأَدْبَارَ ثُمَّ
لَا يُنْصَرُونَ ⑫

13. ಇವರ ಹೃದಯಗಳಲ್ಲಿ ಅಲ್ಲಾಹನಿಗಿಂತ ಅಧಿಕವಾಗಿ ನಿಮ್ಮ ಭಯವಿದೆ. ಏಕೆಂದರೆ ಇವರು ಅರಿವಿಲ್ಲದವರಾಗಿದ್ದಾರೆ.[16]

لَأَنْتُمْ أَشَدُّ رَهْبَةً فِي صُدُورِهِمْ
مِنَ اللَّهِ ذَٰلِكَ بِأَنَّهُمْ قَوْمٌ لَا يَفْقَهُونَ ⑬

ಬಗ್ಗೆಯೂ ಮನಸ್ಸಿನಲ್ಲಿ ದ್ವೇಷಾಸೂಯೆಯನ್ನು ಹೊಂದಿರಬಾರದು. ತಮಗಿಂತ ಹಿಂದೆ ಗತಿಸಿ ಹೋದ ಮುಸ್ಲಿಮರ ಕ್ಷಮೆಗಾಗಿ ಅವರು ಪ್ರಾರ್ಥಿಸುತ್ತಿರಬೇಕು. ಅವರನ್ನೆಂದೂ ಶಪಿಸಬಾರದು ಅಥವಾ ಮೂದಲಿಸಬಾರದು.

15. ಈ ರುಕೂಅ್‌ನ (ಪರಿಚ್ಛೇದ) ಉದ್ದಕ್ಕೂ ಕಪಟವಿಶ್ವಾಸಿಗಳ ಧೋರಣೆಯ ಬಗ್ಗೆ ಚರ್ಚಿಸಲಾಗಿದೆ. ಪ್ರವಾದಿವರ್ಯರು(ಸ) ಬನೀ ನಝೀರ್ ಗೋತ್ರದವರಿಗೆ ಮದೀನಾದಿಂದ ಹೊರಟು ಹೋಗಲು ಹತ್ತು ದಿನದ ಗಡುವು ಕೊಟ್ಟಿದ್ದರು. ಅವರ ಮೇಲೆ ಮುತ್ತಿಗೆ ಹಾಕಲು ಇನ್ನು ಕೆಲವೇ ದಿನಗಳು ಉಳಿದಿದ್ದವು. ಆಗ ಕಪಟವಿಶ್ವಾಸಿಗಳ ನಾಯಕರು, ನಾವು ಎರಡು ಸಾವಿರ ಸಂಖ್ಯೆಯ ಸೇನೆಯೊಂದಿಗೆ ನಿಮ್ಮ ನೆರವಿಗೆ ಬರುವೆವು ಹಾಗೂ ಬನೀಕುರೈಝಾ ಮತ್ತು ಬನೀಗತ್‌ಫಾನ್‌ನವರೂ ನಿಮ್ಮ ನೆರವಿಗೆ ಸಿದ್ಧರಿರುವರು. ಆದ್ದರಿಂದ ನೀವು ಮುಸ್ಲಿಮರ ವಿರುದ್ಧ ಸ್ಥಿರವಾಗಿ ನಿಲ್ಲಿರಿ ಮತ್ತು ಎಂದೂ ಅವರೆದುರು ಸೋಲೊಪ್ಪಿಕೊಳ್ಳದಿರಿ. ಅವರು ನಿಮ್ಮೊಡನೆ ಹೋರಾಡಿದರೆ ನಾವೂ ನಿಮ್ಮ ಜತೆ ಸೇರಿ ಹೋರಾಡುವೆವು. ನಿಮ್ಮನ್ನು ಇಲ್ಲಿಂದ ಹೊರಹಾಕಲಾದರೆ ನಾವು ಇಲ್ಲಿಂದ ಹೊರಟು ಬಿಡುವೆವು ಎಂದು ಮುಂತಾಗಿ ಹೇಳಿ ಕಳುಹಿಸಿದರು.

16. ಈ ಸಣ್ಣ ವಾಕ್ಯದ ಮೂಲಕ ದೊಡ್ಡ ವಾಸ್ತವಿಕತೆಯೊಂದನ್ನು ವಿವರಿಸಲಾಗಿದೆ. ನಿಜವಾಗಿ ಭಯಪಡಲರ್ಹವಾದುದು ಅಲ್ಲಾಹನ ಶಕ್ತಿಯೇ ವಿನಾ ಮಾನವ ಶಕ್ತಿಯಲ್ಲವೆಂದು ಬುದ್ಧಿ-ವಿವೇಕ ಇರುವ ವ್ಯಕ್ತಿ ತಿಳಿದಿರುತ್ತಾನೆ. ಆದ್ದರಿಂದ ದೇವನ ವಿಚಾರಣೆಯನ್ನೆದುರಿಸಬೇಕಾದಂತಹ ಎಲ್ಲಾ ಕೆಲಸಗಳಿಂದಲೂ ಅವನು ದೂರವಿರುತ್ತಾನೆ. ಯಾವುದೇ ಮಾನವ ಶಕ್ತಿಯ ದೃಷ್ಟಿಯಲ್ಲಿ ಅದು ವಿಚಾರಣಾರ್ಹವೋ ಅಲ್ಲವೋ ಎಂಬುದನ್ನು ಅವನು ಗಮನಿಸುವುದಿಲ್ಲ. ದೇವನು ವಿಧಿಸಿರುವಂತಹ ಪ್ರತಿಯೊಂದು ಕರ್ತವ್ಯವನ್ನು ನಿಭಾಯಿಸಲಿಕ್ಕೂ ಅವನು ಸಿದ್ಧನಾಗುತ್ತಾನೆ. ಲೋಕದ ಶಕ್ತಿಗಳೆಲ್ಲವೂ ಅದಕ್ಕೆ ಅಡ್ಡಿಯಾಗಿ ನಿಂತರೂ ಅವನು ಲೆಕ್ಕಿಸುವುದಿಲ್ಲ. ಆದರೆ ವಿವೇಕಹೀನನಾದ ವ್ಯಕ್ತಿ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಯಾವ ಧೋರಣೆಯನ್ನು ತಳೆಯಬೇಕೆಂದು ದೇವನ ಬದಲು ಮಾನವೀಯ ಶಕ್ತಿಗಳನ್ನು ಗಮನದಲ್ಲಿರಿಸಿ ತೀರ್ಮಾನ ಮಾಡುತ್ತಾನೆ. ಅವನು ಯಾವುದೇ ವಿಷಯದಲ್ಲಿ ತನ್ನನ್ನು ಸುರಕ್ಷಿತವಾಗಿರಿಸಿಕೊಳ್ಳುವುದು ದೇವನ ವಿಚಾರಣೆಯ ಭಯದಿಂದಲ್ಲ. ಬದಲಾಗಿ ಯಾವುದಾದರೊಂದು ಮಾನವೀಯ ಶಕ್ತಿ ನನ್ನನ್ನು ವಿಚಾರಿಸಿಕೊಳ್ಳಲಿದೆ ಎಂಬ ಕಾರಣಕ್ಕಾಗಿರುತ್ತದೆ.

14. ಇವರೆಂದೂ ಒಟ್ಟಾಗಿ (ತೆರೆದ ಮೈದಾನದಲ್ಲಿ) ನಿಮ್ಮ ವಿರುದ್ಧ ಹೋರಾಡಲಾರರು. ಇವರು ಯುದ್ಧ ಮಾಡುವುದಿದ್ದರೂ ಕೋಟೆಗಳಿಂದಾವೃತವಾದ ವಸತಿಗಳಿಂದ ಅಥವಾ ಗೋಡೆಗಳ ಮರೆಯಲ್ಲಿ ಅವಿತುಕೊಂಡು ಮಾತ್ರ. ಇವರು ತಮ್ಮ ಒಳ ಜಗಳಗಳಲ್ಲಿ ಬಹಳ ಕಠೋರರಾಗಿದ್ದಾರೆ. ನೀವು ಇವರನ್ನು ಸಂಘಟಿತರೆಂದು ಭಾವಿಸುತ್ತೀರಿ. ಆದರೆ, ಇವರ ಮನಸ್ಸುಗಳು ಪರಸ್ಪರರಿಂದ ಸಿಡಿದು ಹೋಗಿವೆ. ಇವರು ಬುದ್ಧಿಹೀನ ಜನರಾಗಿರುವುದರಿಂದ ಇವರ ಸ್ಥಿತಿ ಹೀಗಾಗಿದೆ.

لَا يُقَاتِلُونَكُمْ جَمِيعًا إِلَّا فِي قُرًى مُّحَصَّنَةٍ أَوْ مِن وَرَاءِ جُدُرٍ ۚ بَأْسُهُم بَيْنَهُمْ شَدِيدٌ ۚ تَحْسَبُهُمْ جَمِيعًا وَقُلُوبُهُمْ شَتَّىٰ ۚ ذَٰلِكَ بِأَنَّهُمْ قَوْمٌ لَّا يَعْقِلُونَ ﴿١٤﴾

15. ಇವರ ಸ್ಥಿತಿಯು, ಇವರಿಗಿಂತ ಸ್ವಲ್ಪವೇ ಕಾಲ ಹಿಂದೆ ತಮ್ಮ ಕೃತ್ಯಗಳ ದುಷ್ಪರಿಣಾಮವನ್ನು ಅನುಭವಿಸಿದ ಜನರಂತಿದೆ.[17] ಇವರಿಗಾಗಿ ವೇದನಾಯುಕ್ತ ಯಾತನೆ ಇದೆ.

كَمَثَلِ الَّذِينَ مِن قَبْلِهِمْ قَرِيبًا ۖ ذَاقُوا وَبَالَ أَمْرِهِمْ وَلَهُمْ عَذَابٌ أَلِيمٌ ﴿١٥﴾

16. ಇವರ ಉದಾಹರಣೆಯು ಶೈತಾನನಂತಿದೆ. ಮೊದಲು ಅವನು ಮನುಷ್ಯನೊಡನೆ- "ಸತ್ಯವನ್ನು ನಿರಾಕರಿಸು" ಎನ್ನುತ್ತಾನೆ ಮತ್ತು ಮನುಷ್ಯನು ಸತ್ಯವನ್ನು ನಿರಾಕರಿಸಿ ಬಿಟ್ಟಾಗ- "ನಾನು ನಿನ್ನಿಂದ ಹೊಣೆಮುಕ್ತನಾಗಿದ್ದೇನೆ. ನನಗಂತು ಸರ್ವಲೋಕಗಳ ಪಾಲಕ ಪ್ರಭುವಿನ ಭಯವಾಗುತ್ತದೆ" ಎನ್ನುತ್ತಾನೆ.

كَمَثَلِ الشَّيْطَانِ إِذْ قَالَ لِلْإِنسَانِ اكْفُرْ فَلَمَّا كَفَرَ قَالَ إِنِّي بَرِيءٌ مِّنكَ إِنِّي أَخَافُ اللَّهَ رَبَّ الْعَالَمِينَ ﴿١٦﴾

17. ಶಾಶ್ವತವಾಗಿ ನರಕಾಗ್ನಿಗೆ ಬೀಳುವುದೇ ಇವರೀರ್ವರ ಅಂತಿಮ ಗತಿ ಮತ್ತು ಇದೇ ಅಕ್ರಮಿಗಳಿಗಿರುವ ಪ್ರತಿಫಲ.

فَكَانَ عَاقِبَتَهُمَا أَنَّهُمَا فِي النَّارِ خَالِدَيْنِ فِيهَا ۚ وَذَٰلِكَ جَزَاءُ الظَّالِمِينَ ﴿١٧﴾ ٢ع٧ ٥

18. ಸತ್ಯವಿಶ್ವಾಸಿಗಳೇ, ಅಲ್ಲಾಹನನ್ನು ಭಯಪಡಿರಿ ಮತ್ತು ಪ್ರತಿಯೊಬ್ಬನೂ, ತಾನು ನಾಳೆಗಾಗಿ ಏನನ್ನು ಸಿದ್ಧಪಡಿಸಿಟ್ಟಿರುವೆನೆಂಬುದನ್ನು ನೋಡಿಕೊಳ್ಳಲಿ.[18] ಅಲ್ಲಾಹನನ್ನು ಭಯಪಡುತ್ತಲಿರಿ. ನಿಶ್ಚಯವಾಗಿಯೂ ನೀವು ಮಾಡುತ್ತಿರುವ ಸಕಲ ಕರ್ಮಗಳನ್ನು ಅಲ್ಲಾಹನು ಬಲ್ಲವನಾಗಿರುತ್ತಾನೆ.

يَا أَيُّهَا الَّذِينَ آمَنُوا اتَّقُوا اللَّهَ وَلْتَنظُرْ نَفْسٌ مَّا قَدَّمَتْ لِغَدٍ ۖ وَاتَّقُوا اللَّهَ ۚ إِنَّ اللَّهَ خَبِيرٌ بِمَا تَعْمَلُونَ ﴿١٨﴾

ದೇವನು ಆಜ್ಞಾಪಿಸಿದ್ದಾನೆಂಬ ಕಾರಣಕ್ಕಾಗಿ ಅವನು ಯಾವುದೇ ಕೆಲಸ ಮಾಡುವುದಿಲ್ಲ. ಬದಲಾಗಿ ಯಾವುದೋ ಮಾನವೀಯ ಶಕ್ತಿಯ ಆಜ್ಞೆ ಅಥವಾ ಮೆಚ್ಚುಗೆಯ ಆಧಾರದಲ್ಲಿ ಅವನು ಆ ಕೆಲಸ ಮಾಡುತ್ತಾನೆ. ವಿವೇಕ ಮತ್ತು ಅವಿವೇಕದ ಈ ಅಂತರವೇ ನಿಜವಾಗಿ ಸತ್ಯವಿಶ್ವಾಸಿ ಮತ್ತು ಸತ್ಯನಿಷೇಧಿಯ ಚಾರಿತ್ರ್ಯದಲ್ಲಿ ವ್ಯತ್ಯಾಸವನ್ನುಂಟು ಮಾಡುತ್ತದೆ.

17. ಇಂತಹ ದೌರ್ಬಲ್ಯಗಳಿಂದಾಗಿಯೇ ಕುರೈಶರ ಪೈಕಿಯ ಸತ್ಯನಿಷೇಧಿಗಳು ಮತ್ತು 'ಬನೀ ಕೈನುಕಾಅ್' ಗೋತ್ರದ ಯಹೂದಿಗಳು ತನ್ನ ಸಂಖ್ಯಾಧಿಕ್ಯ ಮತ್ತು ಸಾಧನಾನುಕೂಲತೆಗಳ ಹೊರತಾಗಿಯೂ ಸರಕು-ಸಾಧನಗಳೇನೂ ಇಲ್ಲದ ಬೆರಳೆಣಿಕೆಯಷ್ಟಿದ್ದ ಮುಸ್ಲಿಮ್ ಸಮೂಹದಿಂದ ಸೋಲನುಭವಿಸಿದ್ದರು. ಅದರ ಕಡೆಗೇ ಇಲ್ಲಿ ಸೂಚಿಸಲಾಗಿದೆ.

18. ನಾಳೆ ಎಂದರೆ ಪರಲೋಕ. ಅರ್ಥಾತ್, ಲೋಕದ ಸಮಸ್ತ ಜೀವನವು ಇಂದಿಗೆ ಸಮಾನವಾಗಿದ್ದು ಅದರ ನಂತರ ಬರಲಿರುವ ನಾಳೆಯೇ ಪರಲೋಕವಾಗಿದೆ.

19. ಯಾರು ಅಲ್ಲಾಹನನ್ನು ಮರೆತಾಗ ಅಲ್ಲಾಹನು ಅವರು ತಮ್ಮನ್ನು ತಾವೇ ಮರೆತು ಬಿಡುವಂತೆ ಮಾಡಿದನೋ ಅವರಂತೆ ನೀವಾಗಬಾರದು.[19] ಅವರೇ ಕರ್ಮಭ್ರಷ್ಟರು.

وَلَا تَكُوْنُوْا كَالَّذِيْنَ نَسُوا اللّٰهَ فَاَنْسٰهُمْ اَنْفُسَهُمْ ؕ اُولٰٓئِكَ هُمُ الْفٰسِقُوْنَ ﴿۱۹﴾

20. ನರಕಾಗ್ನಿಗೆ ಬೀಳುವವರು ಮತ್ತು ಸ್ವರ್ಗಕ್ಕೆ ಹೋಗುವವರು ಎಂದೂ ಸಮಾನರಾಗಲಾರರು. ಸ್ವರ್ಗಕ್ಕೆ ಹೋಗುವವರೇ ನಿಜವಾದ ವಿಜಯಿಗಳು.

لَا يَسْتَوِيْٓ اَصْحٰبُ النَّارِ وَاَصْحٰبُ الْجَنَّةِ ؕ اَصْحٰبُ الْجَنَّةِ هُمُ الْفَآئِزُوْنَ ﴿۲۰﴾

21. ನಾವು ಈ ಕುರ್‌ಆನನ್ನು ಒಂದು ಪರ್ವತದ ಮೇಲೆ ಇಳಿಸಿ ಬಿಡುತ್ತಿದ್ದರೆ, ಅದು ಅಲ್ಲಾಹನ ಭಯದಿಂದ ಮುದುಡಿ ನುಚ್ಚು ನೂರಾಗುವುದನ್ನು ನೀವು ಕಾಣುತ್ತಿದ್ದಿರಿ.[20] ಜನರು (ತಮ್ಮ ಅವಸ್ಥೆಯ ಕುರಿತು) ಚಿಂತಿಸಲೆಂದು ನಾವು ಅವರ ಮುಂದೆ ಈ ಉಪಮೆಗಳನ್ನು ವಿವರಿಸುತ್ತೇವೆ.

لَوْ اَنْزَلْنَا هٰذَا الْقُرْاٰنَ عَلٰى جَبَلٍ لَّرَاَيْتَهٗ خَاشِعًا مُّتَصَدِّعًا مِّنْ خَشْيَةِ اللّٰهِ ؕ وَتِلْكَ الْاَمْثَالُ نَضْرِبُهَا لِلنَّاسِ لَعَلَّهُمْ يَتَفَكَّرُوْنَ ﴿۲۱﴾

22. ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ.[21] ಅಗೋಚರವಾದ ಮತ್ತು ಗೋಚರವಾಗಿರುವ ಎಲ್ಲವನ್ನೂ ಬಲ್ಲವನು. ಅವನೇ ಪರಮ ದಯಾಮಯನೂ ಕರುಣಾನಿಧಿಯೂ ಆಗಿರುತ್ತಾನೆ.

هُوَ اللّٰهُ الَّذِيْ لَآ اِلٰهَ اِلَّا هُوَ ۚ عٰلِمُ الْغَيْبِ وَالشَّهَادَةِ ۚ هُوَ الرَّحْمٰنُ الرَّحِيْمُ ﴿۲۲﴾

23. ಅವನೇ ಅಲ್ಲಾಹ್ ಅವನ ಹೊರತು ಬೇರಾವ ಆರಾಧ್ಯನೂ ಇಲ್ಲ. ಅವನು ಸಾಮ್ರಾಟನು, ಪರಮ ಪಾವನನು,[22] ಸಾದ್ಯಂತ

هُوَ اللّٰهُ الَّذِيْ لَآ اِلٰهَ اِلَّا هُوَ ۚ اَلْمَلِكُ الْقُدُّوْسُ السَّلٰمُ الْمُؤْمِنُ الْمُهَيْمِنُ

19. ಅರ್ಥಾತ್- ದೇವವಿಸ್ಮೃತಿಯ ನಿಶ್ಚಿತವಾದ ಪರಿಣಾಮ ತನ್ನನ್ನು ತಾನೇ ಮರೆತು ಬಿಡುವುದಾಗಿದೆ. ತಾನು ಯಾರ ದಾಸನಾಗಿದ್ದೇನೆ ಎಂಬುದನ್ನು ವ್ಯಕ್ತಿ ಮರೆತು ಬಿಟ್ಟರೆ ಅವನು ಖಂಡಿತವಾಗಿ ಲೋಕದಲ್ಲಿ ತನಗೆ ಒಂದು ತಪ್ಪು ನೆಲೆಯನ್ನು ಗೊತ್ತುಪಡಿಸಿಕೊಳ್ಳುತ್ತಾನೆ. ಈ ಮೂಲಭೂತ ತಪ್ಪು ಕಲ್ಪನೆಯಿಂದಾಗಿ ಅವನ ಸಮಸ್ತ ಜೀವನವೇ ತಪ್ಪು ದಿಕ್ಕಿನಲ್ಲಿ ಸಾಗುತ್ತದೆ. ಹಾಗೆಯೇ ತಾನು ಒಬ್ಬ ದೇವನ ವಿನಾ ಮತ್ತಾರ ದಾಸನೂ ಅಲ್ಲ ಎಂಬುದನ್ನು ಅವನು ಮರೆತು ಬಿಟ್ಟಾಗ ಅವನು ನಿಜವಾಗಿ ತಾನು ಯಾರ ದಾಸನಾಗಿದ್ದೇನೋ ಅವನೊಬ್ಬನ ದಾಸ್ಯವನ್ನು ಬಿಟ್ಟು ತಾನು ನಿಜವಾಗಿ ಯಾರ ದಾಸನಲ್ಲವೋ ಅಂತಹ ಅನೇಕರ ದಾಸ್ಯವನ್ನು ಸ್ವೀಕರಿಸಿಕೊಳ್ಳುತ್ತಾನೆ.

20. ಈ ಉದಾಹರಣೆಯ ಅರ್ಥವೇನೆಂದರೆ- ಕುರ್‌ಆನ್ ಯಾವ ರೀತಿ ಅಲ್ಲಾಹನ ಮಹಾನತೆ ಮತ್ತು ಅವನ ಬಗ್ಗೆ ದಾಸನಿಗಿರುವ ಜವಾಬ್ದಾರಿಕೆ ಮತ್ತು ಉತ್ತರದಾಯಿತ್ವವನ್ನು ಸ್ಪಷ್ಟವಾಗಿ ವಿವರಿಸುತ್ತದೋ ಅದರ ಬಗ್ಗೆ ಪರ್ವತದಂತಹ ಉನ್ನತ ಸೃಷ್ಟಿಗೂ ತಿಳುವಳಿಕೆ ಪ್ರಾಪ್ತವಾಗುತ್ತಿದ್ದರೆ ಮತ್ತು ಯಾವ ಶಕ್ತಿಶಾಲಿ ಪ್ರಭುವಿನ ಮುಂದೆ ತನಗೆ ತನ್ನ ಕರ್ಮಗಳ ಉತ್ತರ ಕೊಡಬೇಕಾಗಿದೆ ಎಂದು ತಿಳಿದಿರುತ್ತಿದ್ದರೆ ಅದೂ ಭಯದಿಂದ ಕಂಪಿಸಿ ಬಿಡುತ್ತಿತ್ತು.

21. ಅರ್ಥಾತ್- ದಾಸ್ಯ ಮತ್ತು ಪೂಜೆಗೆ ಅರ್ಹವಾದ ಉನ್ನತ ಸ್ಥಾನಮಾನ ಹೊಂದಿರುವವರು ಅವನಲ್ಲದೆ ಮತ್ತಾರೂ ಇಲ್ಲ. ಅವನ ಹೊರತು ಬೇರಾರೂ ದೇವತ್ವದ ಗುಣವಿಶೇಷತೆ ಮತ್ತು ಅಧಿಕಾರಗಳನ್ನು ಹೊಂದಿಲ್ಲ. ಹಾಗಿರುವಾಗ ಅವರು ಆರಾಧ್ಯರಾಗುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

22. ಅರ್ಥಾತ್- ಅವನ ಅಸ್ತಿತ್ವ ಯಾವುದೇ ದೋಷ, ಕೊರತೆ ಅಥವಾ ಕೆಟ್ಟ ಗುಣದಿಂದ ಅತೀತವಾಗಿರುವಷ್ಟರ ಮಟ್ಟಿಗೆ ಅವನು ಉನ್ನತನೂ ಶ್ರೇಷ್ಠನೂ ಆಗಿದ್ದಾನೆ. ಅವನು ಪರಮ ಪಾವನನಾಗಿದ್ದಾನೆ. ಅವನ ಬಗ್ಗೆ ಯಾವುದೇ ಕೆಡುಕನ್ನು ಕಲ್ಪಿಸಲಿಕ್ಕೂ ಸಾಧ್ಯವಿಲ್ಲ.

ٱلْعَزِيزُ ٱلْجَبَّارُ ٱلْمُتَكَبِّرُ ۚ سُبْحَٰنَ ٱللَّهِ عَمَّا يُشْرِكُونَ ﴿٢٣﴾

ಮಂಗಲಮಯನು,[23] ಶಾಂತಿದಾತನು,[24] ಸಂರಕ್ಷಕನು,[25] ಪ್ರಬಲನು, ತನ್ನ ಆಜ್ಞೆಯನ್ನು ಶಕ್ತಿಯಿಂದ ಅನುಷ್ಠಾನಿಸಿ ಬಿಡುವವನು, ಸದಾ ಸರ್ವೋನ್ನತನಾಗಿಯೇ ಇರುವವನು, ಜನರು ಮಾಡುತ್ತಿರುವ ಸಹಭಾಗಿತ್ವದಿಂದ ಅಲ್ಲಾಹನು ಪರಿಶುದ್ಧನು.

هُوَ ٱللَّهُ ٱلْخَٰلِقُ ٱلْبَارِئُ ٱلْمُصَوِّرُ ۖ لَهُ ٱلْأَسْمَآءُ ٱلْحُسْنَىٰ ۚ يُسَبِّحُ لَهُۥ مَا فِى ٱلسَّمَٰوَٰتِ وَٱلْأَرْضِ ۖ وَهُوَ ٱلْعَزِيزُ ٱلْحَكِيمُ ﴿٢٤﴾ ع

24. ಸೃಷ್ಟಿಯ ಯೋಜನೆ ಮಾಡುವವನೂ ಅದನ್ನು ಜಾರಿಗೊಳಿಸುವವನೂ ಅದರಂತೆ ರೂಪ ಕೊಡುವವನೂ ಅಲ್ಲಾಹನೇ. ಅವನಿಗೆ ಅತ್ಯುತ್ತಮ ನಾಮಗಳಿವೆ. ಭೂಮಿ-ಆಕಾಶಗಳಲ್ಲಿರುವ ಪ್ರತಿಯೊಂದು ವಸ್ತುವೂ ಅವನನ್ನು ಜಪಿಸುತ್ತಿದೆ[26] ಮತ್ತು ಅವನು ಪ್ರಬಲನೂ ಯುಕ್ತಿಪೂರ್ಣನೂ ಆಗಿರುತ್ತಾನೆ.

---

23. ಅರ್ಥಾತ್- ಅವನ ಅಸ್ತಿತ್ವವು ಯಾವುದೇ ಆಪತ್ತು, ದೌರ್ಬಲ್ಯ ಅಥವಾ ಕೊರತೆ ಎದುರಾಗುವುದ ರಿಂದ ಮುಕ್ತವಿದೆ. ಅವನ ಪರಿಪೂರ್ಣತೆಗೆ ಎಂದೂ ಕೊನೆಯುಂಟಾಗಲಾರದು.
24. ಅರ್ಥಾತ್- ಅವನ ಸೃಷ್ಟಿಗಳು ಅವನಿಂದಾಗಿ ಶಾಂತಿಯಲ್ಲಿರುವರು. ಅವನು ಎಂದೂ ಅವರ ಮೇಲೆ ಅಕ್ರಮವೆಸಗಲಾರ, ಅವರ ಹಕ್ಕುಚ್ಯುತಿ ಮಾಡಲಾರ, ಪುಣ್ಯಫಲವನ್ನು ನಾಶಮಾಡಲಾರ ಅಥವಾ ಅವರ ಬಗ್ಗೆ ಮಾಡಿರುವ ವಾಗ್ದಾನಗಳನ್ನು ಮುರಿಯಲಾರ.
25. ಮೂಲದಲ್ಲಿ 'ಮುಹೈಮಿನ್' ಎಂಬ ಪದ ಪ್ರಯೋಗವಾಗಿದೆ. ಅದಕ್ಕೆ ಮೂರು ಅರ್ಥಗಳಿವೆ. ಮೊದಲನೆಯದಾಗಿ ಮೇಲ್ವಿಚಾರಣೆ ಮತ್ತು ರಕ್ಷಣೆ ಮಾಡುತ್ತಿರುವವನು. ಎರಡನೆಯದಾಗಿ ಯಾರೇನು ಮಾಡುತ್ತಿದ್ದಾರೆಂದು ನೋಡುತ್ತಿರುವವನು. ಮೂರನೆಯದಾಗಿ ಜನರ ಅವಶ್ಯಕತೆ ಮತ್ತು ಬಯಕೆಗಳನ್ನು ಈಡೇರಿಸುವ ಹೊಣೆ ಹೊತ್ತವನು.
26. ಅರ್ಥಾತ್- ಅವು ತಮ್ಮ ಅಸ್ತಿತ್ವ ಅಥವಾ ಮಾತಿನ ಮೂಲಕ ತಮ್ಮ ಸೃಷ್ಟಿಕರ್ತ ಎಲ್ಲಾ ಬಗೆಯ ದೋಷ, ದೌರ್ಬಲ್ಯ ಮತ್ತು ತಪ್ಪಿನಿಂದ ಮುಕ್ತನೆಂದು ಸಾರಿ ಹೇಳುತ್ತಿವೆ.